# ಕನ್ನಡಿಗರು ಸಿನಿಮಾ ನೋಡುತ್ತಿಲ್ಲವೆ?

ಡಾ.ರಾಜ್‌ಕುಮಾರ್ ಮತ್ತು ವಿಷ್ಣುವರ್ಧನ್ ಅವರ ಕಾಲದಲ್ಲಿ ಕನ್ನಡ ಸಿನಿಮಾಗಳನ್ನು ಥಿಯೇಟರಿಗೇ ಹೋಗಿ ನೋಡುತ್ತಿದ್ದ ಲಕ್ಷಾಂತರ ಕನ್ನಡಿಗರು ಈಗ ಇದ್ದಕ್ಕಿದ್ದಂತೆ ಏಕೆ ಥಿಯೇಟರ್‌ಗಳಿಂದ ದೂರವಾಗಿದ್ದಾರೆ?

‘ಆರೂಕಾಲು ಕೋಟಿ ಕನ್ನಡಿಗರ ಪೈಕಿ ಕನ್ನಡ ಸಿನಿಮಾ ನೋಡುವವರ ಸಂಖ್ಯೆ 25 ಲಕ್ಷವನ್ನೂ ದಾಟುವುದಿಲ್ಲ’ ಎನ್ನುವ ‘ಸತ್ಯ’ವೊಂದನ್ನು ರಾಜ್ಯ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ರಾಜೇಂದ್ರಸಿಂಗ್ ಬಾಬು ಪ್ರಕಟಿಸಿದ್ದಾರೆ. ಮ್ಯಾನೇಜ್‌ಮೆಂಟ್ ಪಾಠ ಮಾಡುವ ಕಾಲೇಜೊಂದರ ಸಮೀಕ್ಷೆಯಲ್ಲಿ ಈ ‘ಸತ್ಯ’ಶೋಧವಾಗಿದೆ ಎಂದೂ ಬಾಬು ತಿಳಿಸಿದ್ದಾರೆ. ಹಾಗೆಂದು ಕನ್ನಡಿಗರು ‘ಸಿನಿಮಾದ್ವೇಷಿ’ಗಳಂತೂ ಖಂಡಿತಾ ಅಲ್ಲ. ಬೇರೆ ಭಾಷೆಯ ಸಿನಿಮಾಗಳನ್ನು ಸಾಕಷ್ಟು ನೋಡುತ್ತಾರೆ. ಉದಾಹರಣೆಗೆ ಕಳೆದ ವಾರ ಬಿಡುಗಡೆಯಾದ ತೆಲುಗಿನ ‘ಬಾಹುಬಲಿ’ ಸಿನಿಮಾದ ಎರಡು ವಾರಗಳ ಎಲ್ಲ ಟಿಕೆಟ್‌ಗಳೂ ಮುಂಗಡ ಬುಕಿಂಗ್ ಆಗಿದೆ. ಇನ್ನೇನು ಹಬ್ಬದ ಬಳಿಕ ಬಿಡುಗಡೆಯಾಗಲಿರುವ ಸಲ್ಮಾನ್ ಖಾನ್ ಅಭಿನಯದ ‘ಭಜರಂಗಿ ಭಾಯ್‌ಜಾನ್’ ಹಿಂದಿ ಚಿತ್ರವನ್ನು ಕೂಡಾ ಕನ್ನಡಿಗರು ಮುಗಿಬಿದ್ದು ನೋಡುವುದರಲ್ಲಿ ಅನುಮಾನವಿಲ್ಲ. ಇದೇಕೆ ಹೀಗೆ.. ಎನ್ನುವ ಪ್ರಶ್ನೆ ಸಹಜ. ಕನ್ನಡಿಗರೇ ಕನ್ನಡ ಸಿನಿಮಾಗಳನ್ನು ನೋಡದಿದ್ದರೆ, ಇನ್ನು ಅನ್ಯ ಮಾತೃಭಾಷೆಯವರು ಕನ್ನಡ ಸಿನಿಮಾ ನೋಡಿಯಾರೆ.. ಎನ್ನುವ ಪ್ರಶ್ನೆಯೂ ಹುಟ್ಟಿಕೊಂಡಿದೆ.

‘ಕನ್ನಡ ಚಿತ್ರೋದ್ಯಮದಲ್ಲಿ ಎಲ್ಲವೂ ಸರಿಯಿಲ್ಲ; ಉದ್ಯಮ ಸಂಕಟದ ಪರಿಸ್ಥಿತಿಯನ್ನು ಎದುರಿಸುತ್ತಿದೆ’ ಎನ್ನುವ ಮಾತುಗಳು ಕೇಳಿಬರುತ್ತಿರುವುದು ಇದೇ ಮೊದಲೇನಲ್ಲ. ಕಳೆದ ಕೆಲವು ವರ್ಷಗಳಿಂದ ಒಂದಲ್ಲ ಒಂದು ವೇದಿಕೆಯಲ್ಲಿ ಚಿತ್ರೋದ್ಯಮಿಗಳು ಈ ಮಾತುಗಳನ್ನು ಆಡುತ್ತಲೇ ಇದ್ದಾರೆ. ವರ್ಷಕ್ಕೆ ಸರಾಸರಿ 180ರಷ್ಟು ಸಿನಿಮಾಗಳನ್ನು ಮಾಡುವ ಕನ್ನಡ ಚಿತ್ರೋದ್ಯಮ, ಪ್ರೇಕ್ಷಕರ ನಿರುತ್ಸಾಹಕ್ಕೆ ಕಾರಣಗಳನ್ನು ಹುಡುಕುವ ಕೆಲಸವನ್ನು ಮಾತ್ರ ವ್ಯವಸ್ಥಿತವಾಗಿ, ವೈಜ್ಞಾನಿಕವಾಗಿ ಮಾಡುತ್ತಿಲ್ಲ. ಉದ್ಯಮದಲ್ಲಿ ನಿರ್ಮಾಪಕರು, ನಿರ್ದೇಶಕರು, ನಟರು, ತಂತ್ರಜ್ಞರು– ಹೀಗೆ ಎಲ್ಲರದ್ದೂ ಎರಡೆರಡು ಗುಂಪುಗಳಿವೆ. ಫಿಲಂ ಚೇಂಬರ್ ಕೂಡಾ ಅಧಿಕೃತವಾಗಿ ಉತ್ತರ ಮತ್ತು ದಕ್ಷಿಣ ಕರ್ನಾಟಕದ್ದು ಎಂದು ವಿಭಜನೆಗೊಂಡಿದೆ. ನಿಜಕ್ಕೂ ಕನ್ನಡ ಪ್ರೇಕ್ಷಕರಿಗೆ ಎಂತಹ ಸಿನಿಮಾಗಳು ಬೇಕು ಎನ್ನುವ ಬಗ್ಗೆ ಚಿತ್ರರಂಗ ಒಮ್ಮತದಿಂದ ಕುಳಿತು ಚರ್ಚಿಸಿದ್ದು ಉಂಟೆ? ‘ಡಬ್ಬಿಂಗ್ ಸಿನಿಮಾಗಳು ಬರಲೇಕೂಡದು’ ಎಂದು ಕದನಕ್ಕಿಳಿಯುವ ಕನ್ನಡ ಚಿತ್ರೋದ್ಯಮ, ‘ರಿಮೇಕ್’ ಚಿತ್ರಗಳನ್ನು ಮಾತ್ರ ಎಗ್ಗಿಲ್ಲದೆ ಮಾಡುತ್ತಿದೆ! ಸಿನಿಮಾ ಎನ್ನುವುದು ಸೃಜನಶೀಲ ಮಾಧ್ಯಮವೂ ಹೌದು ಎನ್ನುವುದನ್ನು ಪೂರ್ತಿಯಾಗಿ ಮರೆತುಬಿಟ್ಟು, ಬರೀ ಇಂಡಸ್ಟ್ರಿಯಾಗಿ ಲಾಭ–ನಷ್ಟದ ಲೆಕ್ಕಾಚಾರದಲ್ಲಿ ಮಾತ್ರ ತೊಡಗಿದರೆ, ಪ್ರೇಕ್ಷಕರಾದರೂ ಏಕೆ ಥಿಯೇಟರಿಗೆ ಬಂದಾರು? ಹೋಗಲಿ, ಕನ್ನಡಿಗರು ಥಿಯೇಟರಿಗೆ ಬರುವುದನ್ನು ಬಿಟ್ಟದ್ದು ಯಾರ ಕಾಲದಲ್ಲಿ? ಡಾ.ರಾಜ್‌ಕುಮಾರ್ ಮತ್ತು ವಿಷ್ಣುವರ್ಧನ್ ಅವರ ಕಾಲದಲ್ಲಿ ಕನ್ನಡ ಸಿನಿಮಾಗಳನ್ನು ಥಿಯೇಟರಿಗೇ ಹೋಗಿ ನೋಡುತ್ತಿದ್ದ ಲಕ್ಷಾಂತರ ಕನ್ನಡಿಗರು ಈಗ ಇದ್ದಕ್ಕಿದ್ದಂತೆ ಏಕೆ ಥಿಯೇಟರ್‌ಗಳಿಂದ ದೂರವಾಗಿದ್ದಾರೆ?

ಕನ್ನಡದಲ್ಲಿ ಎಲ್ಲ ಸಿನಿಮಾಗಳೂ ಪ್ರೇಕ್ಷಕರ ಕೊರತೆಯನ್ನು ಎದುರಿಸುತ್ತಿವೆ ಎನ್ನುವುದು ಅರ್ಧಸತ್ಯ ಮಾತ್ರವಾಗುತ್ತದೆ. ಈಗಲೂ ನೂರು ದಿನ, ಐವತ್ತು ದಿನಗಳ ಪ್ರದರ್ಶನ ಕಾಣುವ ಚಿತ್ರಗಳು ಇದ್ದೇ ಇವೆ. ಅವುಗಳ ಸಂಖ್ಯೆ ಕಡಿಮೆಯಾಗಿದೆ ಎನ್ನುವುದು ನಿಜ. ಅದಕ್ಕೆ ಕಾರಣ ಕನ್ನಡ ಚಿತ್ರರಂಗವೇ ಹೊರತು, ಕನ್ನಡ ಪ್ರೇಕ್ಷಕರಂತೂ ಖಂಡಿತಾ ಅಲ್ಲ. ಒಂದೇ ಶೈಲಿಯ, ಅದೇ ಚರ್ವಿತ ಚರ್ವಣ ರೌಡಿ ಕಥೆಯ, ಹಿಂಸೆ ಮತ್ತು ಲೈಂಗಿಕತೆಯ ವಿಜೃಂಭಣೆಯ ಅರ್ಥಹೀನ ಸಿನಿಮಾಗಳು ಸಾಲು ಸಾಲಾಗಿ ಬಂದರೆ, ಪ್ರೇಕ್ಷಕರಾದರೂ ಪಾಪ ಎಷ್ಟೂಂತ ನೋಡಿಯಾರು? ‘ರಾಜ್ಯದಲ್ಲಿ ಒಟ್ಟು ಇರುವ ರೌಡಿಗಳ ಸಂಖ್ಯೆಗಿಂತ ಹತ್ತು ಪಟ್ಟು ಹೆಚ್ಚು ರೌಡಿ ಸಿನಿಮಾಗಳು ಕನ್ನಡದಲ್ಲಿವೆ’ ಎನ್ನುವ ಮಾತು ತಮಾಷೆಯಾಗಿ ಕೇಳಿಸಿದರೂ, ಅದರಲ್ಲೂ ಸತ್ಯ ಇದೆಯಲ್ಲ!

ಥಿಯೇಟರಿಗೆ ಬರುತ್ತಿಲ್ಲ ಎಂದರೆ ಕನ್ನಡಿಗರು ಕನ್ನಡ ಸಿನಿಮಾ ನೋಡುತ್ತಿಲ್ಲ ಎಂದು ಅರ್ಥವಲ್ಲ. ಟೀವಿಗಳಲ್ಲಿ ಕನ್ನಡ ಸಿನಿಮಾ ಹಾಕಿದರೆ ನೋಡುತ್ತಿಲ್ಲವೆ? ರಾಷ್ಟ್ರಪ್ರಶಸ್ತಿ ವಿಜೇತ ಕನ್ನಡ ಸಿನಿಮಾಗಳನ್ನು ಸರ್ಕಾರಿ ಸ್ವಾಮ್ಯದ ದೂರದರ್ಶನದಲ್ಲಿ ಹಾಕಿದಾಗ 25 ಲಕ್ಷ ಮಂದಿ ನೋಡಿದ್ದಾರೆ ಎನ್ನುವುದನ್ನು ಅಂಕಿ ಅಂಶಗಳೇ ಸಮರ್ಥಿಸುತ್ತವೆ. ಟಿವಿಗಳಲ್ಲಿ ಬರುವ ಕನ್ನಡದ ಧಾರಾವಾಹಿಗಳನ್ನು (ಗುಣಮಟ್ಟದ ಕಡೆಗೂ ಗಮನ ಕೊಡದೆ) ಮುಗಿಬಿದ್ದು ನೋಡುತ್ತಿಲ್ಲವೆ? ಹಾಗಿದ್ದರೆ ಥಿಯೇಟರಿಗೆ ಏಕೆ ಬರುತ್ತಿಲ್ಲ? ಪ್ರೇಕ್ಷಕರನ್ನು ದೂರುವ ಬದಲು ಪ್ರೇಕ್ಷಕರನ್ನು ಬೆಳೆಸುವ ಕೆಲಸಕ್ಕೆ ಕೈಹಾಕಿದರೆ, ಈ ಪ್ರಶ್ನೆಗೆ ಉತ್ತರ ಸಿಕ್ಕೇ ಸಿಗುತ್ತದೆ. ಪ್ರೇಕ್ಷಕರನ್ನು ಬೆಳೆಸುವುದೆಂದರೆ ಸದಭಿರುಚಿಯ, ಸಹ್ಯ ಹಾಗೂ ಹೊಸತನದ ಸಿನಿಮಾಗಳನ್ನು ತಂತ್ರಜ್ಞಾನದ ಎಲ್ಲ ಸಾಧ್ಯತೆಗಳನ್ನೂ ಬಳಸಿ ಮಾಡುವುದು. ಜತೆಗೆ ಥಿಯೇಟರಿಗೆ ಹೋಗುವುದು ದುಬಾರಿ ಹಾಗೂ ಅಸಹ್ಯ ಅನ್ನಿಸದಂತೆ ನೋಡಿಕೊಳ್ಳುವುದು. ಇದು ಬಿಟ್ಟರೆ ಬೇರೆ ದಾರಿಯಿಲ್ಲ.

■ ಬಿ.ಎಂ.ಹನೀಫ್




ಈಶ್ವರ್